ನಂದಿನಿ ಮತ್ತು ಬಾಳಿಗಾ ಮಧ್ಯೆ ಜಗಳ ನಡೆದಿದೆ. ನಂದಿನಿ ಪ್ರಕಾರ ಅದು ಕ್ರೆಡಿಟ್ ಕಾರ್ಡ್‌ನ ಖರ್ಚಿನ ವಿಚಾರದ ಬಗ್ಗೆ... ಆದರೆ, ಮಂಗಳಾ ಮಾತನ್ನು ನಂಬುವುದಾದರೆ... ಹಂಸಿನಿ ಮತ್ತು ಬಾಳಿಗಾ ಮಧ್ಯೆ ಇದ್ದಿತ್ತು ಎನ್ನಲಾದ ಸಂಬಂಧದ ಬಗ್ಗೆ ಜಗಳ ಆಗಿದೆ... ಇವೆರಡೂ ಕಾರಣಗಳಿಂದ ಕೊಲೆ ಮಾಡಿದ್ದು ನಂದಿನಿ ಅಂತ ಹೇಳಲು ಸಾಧ್ಯವಾಗದು."

"ಸರ್, ಒಂದು ಸಣ್ಣ ಬದಲಾದ ಆಲೋಚನೆ... ಅಕಸ್ಮಾತ್ ಬಾಳಿಗಾನೇ ಹಂಸಿನಿಯ ಮೇಲೆ ಕಣ್ಣು ಹಾಕಿದ್ದು... ಅದನ್ನು ಗಮನಿಸಿದ ನಂದಿನಿ ಕೋಪದಲ್ಲಿ ಬಾಳಿಗಾ ಮೇಲೆ ಗುಂಡು ಹಾರಿಸಿ ಸಾಯಿಸಿದ್ದರೆ? ಅಥವಾ..."

ಭೂಷಣನ ಕಣ್ಣುಗಳು ಅರಳಿದವು. ಒಂದೇ ಕ್ಷಣದಲ್ಲಿ ಮತ್ತೆ ಅದೇ ನಿರ್ಭಾವುಕತೆ! ಎಲ್ಲಿಯೂ ಕೂಡಿಕೊಳ್ಳದ ಲಾಜಿಕ್!

"ಸರ್, ಅಕಸ್ಮಾತ್ ಈ ಕೊಲೆ ಹಂಸಿನಿ ಮಾಡಿದ್ದು... ಆ ಅಂಗವಿಕಲೆಯನ್ನು ಈ ಕೊಲೆ ಅಪವಾದದಿಂದ ರಕ್ಷಿಸಲು ನಂದಿನಿ ತಾನೇ ಬಲಿಪಶು ಆಗಲು ನಿರ್ಧರಿಸಿದಳಾ?" ಮತ್ತೆ ಭೂಷಣನ ಕಣ್ಣುಗಳು ಹೊಳೆದವು. ಮತ್ತೆ ಅದೇ ನಿರ್ಭಾವುಕತೆ!

'ಕೊಲೆ ಹಂಸಿನಿ ಮಾಡಿದ್ದರೆ... ಅದರ ಅಪವಾದ ತನ್ನ ಮೇಲೆ ಹೊತ್ತುಕೊಂಡು ಜೈಲಿಗೆ ಹೋಗಿ... ಹಂಸಿನಿಯನ್ನು ಒಬ್ಬಂಟಿ ಮಾಡುವುದರ ಬದಲು... ಒಬ್ಬ ಒಳ್ಳೆಯ ಲಾಯರ್ ಇಟ್ಟು ಬಚಾವ್ ಮಾಡಿಕೊಳ್ಳುವ ಆಲೋಚನೆ ಮಾಡಬಹುದಿತ್ತು!...'

"ಸರ್, ಯಾರೋ ಅನಂತರಾಮಯ್ಯ ಅನ್ನುವವರೊಬ್ಬರು ಬಂದಿದ್ದಾರೆ... ಬಾಳಿಗಾ ಕೊಲೆ ಕೇಸ್ ಬಗ್ಗೆ ಮಾತಾಡಬೇಕಂತೆ..." ಕಾನ್‌ಸ್ಟೆಬಲ್ ಬಂದು ಹೇಳಿದಾಗ ಭೂಷಣ್ ಮತ್ತು ಅಮಿತಾ ಕಿವಿಗಳು ತಕ್ಷಣ ಚುರುಕಾದವು.

ಬಾಳಿಗಾ ಕೊಲೆ ಕೇಸ್‌ನಲ್ಲಿ ಒಂದು ವರ್ತುಲದಲ್ಲಿ ಸಿಕ್ಕಿಕೊಂಡಿದ್ದರು. ಯಾವುದೇ ಒಂದು ಥಿಯರಿಯಿಂದ ನೋಡಿದರೂ ಕೊಲೆಗೂ ಆ ಥಿಯರಿಗೂ ಸಂಬಂಧ ಗಟ್ಟಿಯಾಗುತ್ತಿರಲಿಲ್ಲ. ನಂದಿನಿಯೇ ಮಾಡಿದ್ದಾಳೆ ಎಂದರೆ, ಅವಳ ಹೇಳಿಕೆಗೂ ಫೋರೆನ್ಸಿಕ್ ರಿಪೋರ್ಟ್‌ಗೂ ತಾಳೆ ಆಗುತ್ತಿಲ್ಲ. ಮಂಗಳಾ ಮಾಡಿದ್ದಾಳೆ ಎನ್ನುವುದಕ್ಕೆ ಕೊಲೆಯಾದ ಸಮಯದಲ್ಲಿ ಆಕೆ ತರಕಾರಿಯವನ ಬಳಿ ಇದ್ದುದಕ್ಕೆ ಸಾಕ್ಷಿ ಇದೆ. ಇನ್ನು, ಹಂಸಿನಿ ಈ ಕೊಲೆ ಮಾಡಿದ್ದಾಳೆ ಎನ್ನುವುದಕ್ಕೆ ಅವಳ ವೀಲ್‌ಚೇರ್ ಸಾಥ್ ಕೊಡುತ್ತಿಲ್ಲ. ಎಲ್ಲಾ ಕಣ್ಣ ಮುಂದೆಯೇ ಇದ್ದರೂ ಎಲ್ಲವೂ ಗೋಜಲು. ಮೂವರೂ ಆರೋಪಿಗಳಷ್ಟೇ... ಕಾನೂನಿನ ಪ್ರಕಾರ ಅವರನ್ನು ಅಪರಾಧಿ ಎಂದು ಪ್ರೂವ್ ಮಾಡಲು ಆಗದು!

"ನನ್ನ ಹೆಸರು ಅನಂತರಾಮಯ್ಯ. ನಾನು ಬಾಳಿಗಾನ ಸ್ನೇಹಿತ..."

ಸುಮಾರು ಐವತ್ತು ವರ್ಷದ ವ್ಯಕ್ತಿ ಗಂಭೀರವಾಗಿ ನುಡಿದ. ಅವನ ವ್ಯಕ್ತಿತ್ವ, ನಡೆ ನುಡಿ ಎಲ್ಲವೂ ಅವನೊಬ್ಬ ಶ್ರೀಮಂತನೆಂದು ತೋರುತ್ತಿದ್ದವು.

"ಈ ಎರಡು ದಿನದಲ್ಲಿ ಬಾಳಿಗಾ ಬಗ್ಗೆ ಕೇಳಿಕೊಂಡು ಬಂದವರಲ್ಲಿ ನೀವೇ ಮೊದಲಿಗರು. ಹೇಳಿ, ಏನು ಮಾತಾಡಬೇಕಿತ್ತು?"

"ನಾನೂ ದೂರ ಆಗಿದ್ದೆ... ಆಗಿರಲಿಲ್ಲ... ಆ ಎರಡು ಪಿಶಾಚಿನಿಯರು ದೂರ ಮಾಡಿದರು..."

ನಂದಿನಿ–ಹಂಸಿನಿಯ ಬಗ್ಗೆ ಮತ್ತೊಂದು ದೃಷ್ಟಿಕೋನ!

"ಅಕ್ಕತಂಗಿ ಸೇರಿ ಬಾಳಿಗಾನ ಕೊಲೆ ಮಾಡಿದ್ದಾರೆ. ನಾನು ಅವನಿಗೆ ಹೇಳಿದ್ದೆ, ಈ ವಯಸ್ಸಿನಲ್ಲಿ ಮತ್ತೆ ಮದುವೆ ಸಂಸಾರ ಇದೆಲ್ಲಾ ಯಾಕೆ, ಅದೂ ಒಬ್ಬಳು ಅಂಗವಿಕಲ ಹುಡುಗಿ ಜೊತೆಗಿದ್ದಾಳೆ... ಇದೆಲ್ಲಾ ವರ್ಕ್ ಆಗಲ್ಲ ಅಂತ... ಕೇಳಲಿಲ್ಲ. ದೊಡ್ಡ ಮನುಷ್ಯ ಅಂತ ತೋರಿಸಿಕೊಳ್ಳಕ್ಕೆ ಆಸೆ. ಮೊದಲೇ ಅವನಿಗೆ ಹಿಂದೆ ಮುಂದೆ ಯಾರಿರಲಿಲ್ಲ ಬೇರೆ. ಅವಳನ್ನು ಹಾಗೇ ಬಿಟ್ರೆ ನಾನು ಸುಮ್ಮನಿರಲ್ಲ... ಕೇಸ್‌ನ ಸುಪ್ರೀಂ ಕೋರ್ಟ್ ತನಕ ತಗೊಂಡು ಹೋಗ್ತೀನಿ."

"ಅದೆಲ್ಲ ಕೋರ್ಟ್ ನೋಡಿಕೊಳ್ಳುತ್ತೆ... ಅಕ್ಕ ತಂಗಿಯರು ಸೇರಿ ಬಾಳಿಗಾ ಕೊಲೆ ಮಾಡಿದ್ದಾರೆ ಅಂತ ನಿಮಗ್ಯಾಕೆ ಅನಿಸುತ್ತಿದೆ?"

"ಮದುವೆ ಆದ ತಕ್ಷಣ ಬಾಳಿಗಾ ಸುಮಾರು ಐದು ಕೋಟಿ ರೂಪಾಯಿಯ ಇನ್ಶೂರೆನ್ಸ್ ಮಾಡಿಸಿದ್ದ... ಅದರ ಏಜೆಂಟ್ ಯಾರು ಗೊತ್ತಾ, ಆ ಕೆಲಸದವಳು ಮಂಗಳಾ..."

***

ಪೊಲೀಸ್ ಜೀಪ್ ಸದ್ದು ಕೇಳುತ್ತಿದ್ದಂತೆಯೇ